ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ ಎಡಿಎಂಐಐ ಇಎಸ್‌ಟಿ 14 110 2021 | 1990

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ: 04.12.2021

## ಸುತ್ತೋಲೆ

ವಿಷಯ: ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ರಿಕ್ತ ಸ್ಥಾನ ವಹಿಯನ್ನು ಪ್ರಸ್ತುತದವರೆಗೆ update ಮಾಡುವ ಬಗ್ಗೆ.

*/*/*/*/*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಪ್ರತಿ ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಿಬ್ಬಂಧಿ ಮಾದರಿ ಮಂಜೂರು ಮಾಡಲಾಗಿದ್ದು, ಮಂಜೂರು ಮಾಡಿದ ಸಿಬ್ಬಂಧಿ ಮಾದರಿಯನ್ವಯ ಸಂಸ್ಥೆವಾರು ರಿಕ್ತಸ್ಥಾನವಹಿಯನ್ನು ನಿರ್ವಹಣೆ ಮಾಡಲಾಗುತ್ತಿದೆ. ಈ ರಿಕ್ತ ಸ್ಥಾನ ವಹಿಯನ್ನು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮುಂಬಡ್ತಿ, ರಾಜೀನಾಮೆ, ನಿವೃತ್ತಿ ಮರಣದಿಂದ ಉಂಟಾದ ರಿಕ್ತ ಸ್ಥಾನಗಳು ತೆರವಾದಾಗ ರಿಕ್ತತೆ ಬಗ್ಗೆ ಹಾಗೂ ಹೊಸದಾಗಿ ನೇಮಕಾತಿ ಹೊಂದಿದಂತಹ ಸಿಬ್ಬಂದಿಗಳ ಸೇವಾ ವಿವರಗಳನ್ನು ಪ್ರಸ್ತುತದವರೆಗೆ ನಮೂದಿಸಿ update ಮಾಡಿರುವುದಿಲ್ಲ. ಆದಕಾರಣದಿಂದ ಸಂಸ್ಥೆಗಳ ಕಾರ್ಯನಿರ್ವಹಿಸುತ್ತಿರುವ ಮತ್ತು ರಿಕ್ತ ಹುದ್ದೆಗಳ ವಿವರಗಳು ವೇತನ ಬಿಲ್ಲುಗಳ ಹುದ್ದೆಗಳೊಂದಿಗೆ ತಾಳೆಯಾಗುತ್ತಿರುವುದಿಲ್ಲ ಹಾಗೂ update ವಿವರಗಳು ಲಭ್ಯವಾಗುತ್ತಿರುವುದಿಲ್ಲ.

ಪ್ರಯುಕ್ತ, ಪೂರಕ ದಾಖಲೆಗಳೊಂದಿಗೆ ತಮ್ಮ ಸಂಸ್ಥೆಗಳ ರಿಕ್ತ ವಹಿಯನ್ನು update ಮಾಡಿ ಪ್ರಾಂಶುಪಾಲರು ಹಾಗೂ ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಸಹಿ ಪಡೆಯುವಂತೆ ಹಾಗೂ ಇನ್ನು ಮುಂದೆ ಮುಂಬಡ್ತಿ, ರಾಜೀನಾಮೆ, ನಿವೃತ್ತಿ, ಮರಣಗಳಿಂದ ಉಂಟಾದ ರಿಕ್ತ ಹುದ್ದೆಗಳ ಸೇವಾ ವಿವರಗಳನ್ನು ರಿಕ್ತವಾದ ಮಾಹೆಯ ಮುಂದಿನ ಮಾಹೆಯಲ್ಲಿ ಕಡ್ಡಾಯವಾಗಿ ರಿಕ್ತಸ್ಥಾನ ವಹಿಯಲ್ಲಿ update ಮಾಡಿ ನಮೂದಿಸುವಂತೆ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ
04/12/21

ಇವರಿಗೆ,
1. ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಸಂಸ್ಥೆಗಳ ಪ್ರಾಂಶುಪಾಲರಿಗೆ-ಮುಂದಿನ ಕ್ರಮಕ್ಕಾಗಿ
2. ಸಂಯೋಜಕರು ಇ-ಆಡಳಿತ ವಿಭಾಗ, ಇಲಾಖಾ web site ರಲ್ಲಿ ಪ್ರಕಟಿಸುವ ಸಲುವಾಗಿ.

ಪ್ರತಿ,
ಕಡತಕ್ಕೆ